ಭೇಟಿ ಮಾಡಿ ದಾನಪ್ಪರ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ವಿಚಾರಗಳನ್ನು ಕಲೆ ಹಾಕಿಕೊಂಡು ಹಿಂತಿರುಗಿದ.

ಟ್ರೈನಿನಲ್ಲಿ ಊರಿಗೆ ಹಿಂತಿರುಗುವಾಗ, ರಾಘವನಿಗೆ ಡಾ.ಅನುರಾಧರ ಸಂಶೋಧನೆ ಸ್ವಲ್ಪ ಸ್ವಲ್ಪವೇ ಸೆನ್ಸು ಮಾಡತೊಡಗಿತು. ಹಿಂದೂ ದರ್ಶನಗಳನ್ನು ಆಳವಾಗಿ ಓದಿಕೊಂಡಿದ್ದ ಅನುರಾಧರು ಕರ್ಮ, ಪುನರ್ಜನ್ಮ, ಆತ್ಮ ಇವುಗಳನ್ನೆಲ್ಲ ನಂಬುತ್ತಿದ್ದರು. ಅವರ ಮಗ ಸಂಜಯನನ್ನು ಅವರ ತಾತನ ಪುನರ್ಜನ್ಮವೆಂದು ಯಾವಾಗಲೂ ಹೇಳುತ್ತಿದ್ದರು. ಸಂಜಯ ಸಣ್ಣವನಾಗಿದ್ದಾಗ ಅವರ ತಾತನ ವಸ್ತುಗಳನ್ನೇ ಇಷ್ಟಪಡುತ್ತಿದ್ದನೆಂದು ಹೇಳುತ್ತಿದ್ದರು. ಅವರ ಬಹುತೇಕ ನಡುವಳಿಕೆ ಅವನೊಂದಿಗೆ ಹೋಲುತ್ತದೆ ಎಂದು ಹೇಳುತ್ತಿದ್ದರು. ಸಂಜಯನ ತಾತರ ಬೆರಳಚ್ಚು ಪಡಿಯಾಗಲಿ ಅಥವಾ ಕಣ್ಣಿನ ಐರಿಸ್ ಸ್ಕ್ಯಾನ್ ಆಗಲಿ ಅವರ ಬಳಿ ಲಭ್ಯವಿದಿದ್ದರೆ ಸಂಜಯ ಅವನ ತಾತನ ಪುನರ್ಜನ್ಮವೆಂದು ವೈಜ್ಞಾನಿಕವಾಗಿ ಸಿದ್ಧಪಡಿಸುತ್ತಿದ್ದರು ಎಂದು ಬಹಳ ಬಾರಿ ರಾಘವ ಮತ್ತು ಅವನ ತಂಡದೊಂದಿಗೆ ತಮ್ಮ ಅಳಲನ್ನು ತೋಡಿಕೊಂಡಿದ್ದರು. ನಿಧಾನವಾಗಿ ಇದೆಲ್ಲವೂ ಸ್ಮರಣೆಯ ಹಿಮ್ಮೇಳದಲ್ಲಿ ನಡೆಯುತ್ತಾ ಹಾಗೆ ನಿದ್ದೆಗೆ ಜಾರಿದ ರಾಘವ ಒಮ್ಮೆಲೇ ತಾನು ತನ್ನ ಅಂತಿಮ ವರ್ಷದ ಪ್ರಾಜೆಕ್ಟ್‌ಗಾಗಿ ಜಾಹ್ನವಿಯ ಬೆರಳಚ್ಚು ಹಾಗೂ ಕಣ್ಣಿನ ಫೋಟೊ ತೆಗೆದುಕೊಂಡದ್ದು ನೆನಪಾಗಿ ದೇಹದಲ್ಲಿ ಮಿಂಚಿನ ಸಂಚಾರ ವಾದಂತಾಗಿ ಚಕ್ಕನೆ ಎದ್ದು ಕೂತ.

* * *

ಜಾಹ್ನವಿ ರಾಘವನ ಜೀವನದಲ್ಲಿ ಎಲ್ಲರಿಗಿಂತ ಹತ್ತಿರದ ಸ್ಥಾನವನ್ನು ಪಡೆದಿದ್ದಳು. ಅವಳನ್ನು ರಾಘವ ಮೊದಲು ಭೇಟಿಯಾದದ್ದು ತನ್ನ ಶಾಲಾ ದಿನಗಳಲ್ಲಿ. ಏಳನೆಯ ತರಗತಿವರೆಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದ ರಾಘವನನ್ನು ವಿಜ್ಞಾನದಲ್ಲಿ ಹಿಂದೆ ಬೀಳಬಾರದೆಂದು ಆಂಗ್ಲ ಮಾಧ್ಯಮ ಶಾಲೆಗೆ ಅವರಪ್ಪ ಸೇರಿಸಿದ್ದರು. ಆಗ ರಾಘವನಿಗೆ ಇಂಗ್ಲಿಷ್ ಭಾಷೆಯ ಪದಗಳನ್ನು ಅರ್ಥಯಿಸಿಕೊಳ್ಳಲು ತಕ್ಷಣಕ್ಕೆ ಸಹಾಯಕ್ಕೆ ಬಂದವರೇ ಜಾಹ್ನವಿಯ ಅಪ್ಪ. ಒಂದೇ ಬೀದಿಯಲ್ಲಿ ಇಬ್ಬರ ಮನೆಗಳಿದ್ದುದರಿಂದ ಸಹಜವಾಗಿಯೇ ಪರಿಚಯವಿತ್ತು. ಅವಳ ಅಪ್ಪ ಇನ್ನೊಂದು ಕನ್ನಡ ಮಾಧ್ಯಮ ಶಾಲೆಯಲ್ಲಿ ವಿಜ್ಞಾನವನ್ನು ಪಾಠ ಮಾಡುತ್ತಿದ್ದರು. ಎಂಟನೇ ತರಗತಿಯ ಮೊದಲರ್ಧದಲ್ಲಿ ಶಾಲೆಯ ನಂತರದ ಸಮಯವನ್ನು ರಾಘವ ಬಹುತೇಕವಾಗಿ ಜಾಹ್ನವಿಯ ಮನೆಯಲ್ಲಿ ಕಳೆದಿದ್ದ. ಆಗ ಶುರುವಾದ ಸ್ನೇಹ ಕ್ರಮೇಣ ಗಾಢವಾಗಿತ್ತು. ರಾಘವ ಒಳ್ಳೆಯ ಗ್ರಹಿಕೆಯುಳ್ಳವನಾಗಿದ್ದ. ಹೊಸ ವಿಚಾರವನ್ನು ಅರ್ಥವಾಗುವವರೆಗೂ ಪಟ್ಟು ಬಿಡದೆ ಕಲಿಯುವುದು ಅವನ ಸ್ವಭಾವವಾಗಿತ್ತು. ಹಾಗಾಗಿ ರಾಘವನಿಗೆ ಕೇವಲ ಒಂದೇ ವರ್ಷದಲ್ಲಿ ಇಂಗ್ಲಿಷ್ ಮಾಧ್ಯಮದ ಹುಡುಗರೊಂದಿಗೆ ಸ್ಪರ್ಧಿಸಲು ಕಷ್ಟವಾದರೂ ವರ್ಷದ ಅಂತ್ಯದ ಹೊತ್ತಿಗೆ ಸಾಧ್ಯವಾಗತೊಡಗಿತ್ತು. ಹಾಗೆಯೇ ಕನ್ನಡ ಪ್ರಬಂಧ, ಭಾಷಣ, ಡಿಬೇಟು ಇಂತಹ ಇತರೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ರಾಘವ ಮುಂದಿದ್ದುದರಿಂದ ಹಾಗೂ ಇವರಿಬ್ಬರು ಬಹಳ ಸಮಯ ಜೊತೆಗೆ ಕಳೆಯುತ್ತಿದ್ದುದರಿಂದ, ಸಹಜವಾಗಿಯೇ ಜಾಹ್ನವಿ ಇವನೆಡೆಗೆ ಆಕರ್ಷಿತಳಾಗಿದ್ದಳು. ಮುಂದೆ ಒಂದೇ ಪಿಯು ಕಾಲೇಜು ಸೇರಿದ್ದರು. ಅವರಿಬ್ಬರ ತಂದೆ ತಾಯಿಯರೂ ಒಬ್ಬರಿಗೊಬ್ಬರು ಪರಿಚಯವಿದ್ದುದರಿಂದ ಇಬ್ಬರೂ ಒಟ್ಟಿಗೆ ಓಡಾಡುವುದು ಸಮಾಜಕ್ಕೆ ಒಪ್ಪಿಕೊಳ್ಳಲು ತ್ರಾಸಾದರೂ ಸಾಧ್ಯವಾಗಿತ್ತು. ಎರಡನೇ ಪಿಯುಸಿ ಮುಗಿಯುವ ಹೊತ್ತಿಗೆ ಹುಡುಗ ಹುಡುಗಿಯರು ಬರೆಯುವ ಸ್ಲಾಮ್ ಬುಕ್ಕಿನಲ್ಲಿ ರಾಘವ ತನ್ನ ಮನದಾಳದ ಪ್ರೇಮ ನಿವೇದನೆಯನ್ನು ಮಾಡಿಕೊಂಡಿದ್ದ. ಇದು ಎಲ್ಲರಿಗೂ ಓದಲು ದೊರಕಿ ಶಾಲೆ ಮುಗಿಯುವ ಹೊತ್ತಿಗೆ ದೊಡ್ಡ ರಾದ್ಧಾಂತವಾಗಿ ಒಬ್ಬರಿಗೊಬ್ಬರು ಕೆಲಕಾಲ ಮಾತು ಬಿಟ್ಟಿದ್ದರು. ರಜೆಯಲ್ಲಿ ಬಂದ ಜಾಹ್ನವಿ ದೀಪಾವಳಿಯ ಸಂದರ್ಭದಲ್ಲಿ ಸಿಕ್ಕಾಗ, ರಾಘವ ಪ್ರತ್ಯೇಕವಾಗಿ ಕ್ಷಮೆ ಕೋರಿ ಇನ್ನೊಮ್ಮೆ ಹೀಗೆ ಯೋಚಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ.